ಅದನ್ನು ತೆಗೆದುಕೊಳ್ಳುವವರು ನೋಡಿ ಸರಿಯಾಗಿ ಇದೆಯೇ, ಇಲ್ಲವೆ, ಎಂದು ನೋಡಿತೆಗೆದುಕೊಳ್ಳಬೇಕಾಗುತ್ತದೆ. ಕಳಪೆ ಇದ್ದರೆ ಅವುಗಳನ್ನು ರಿಜೆಕ್ಟ್ ಮಾಡುವುದಕ್ಕೆ ಅವಕಾಶ ಇದೆ. ಕಳಪೆ ಆಹಾರ ಪದಾರ್ಥಗಳನ್ನು ಕೂಟ್ಟಿದ್ದರೆ ಸಂಬಂಧಪಟ್ಟವರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಬಿ. ಆರ್. ಪಾಟೀಲ್.—ಸರಕಾರದವರು ಕೊಡತಕ್ಕಂತಹ ಸಬ್ಸಿಡಿ ಗ್ರಾಮಾಂತರ ಪ್ರದೇಶಗಳಿಗೆ ಎಷ್ಟು ಹೋಗಿದೆ ? ಸಿಟಿಗೆ ಎಷ್ಟು ಹೋಗಿದೆ ? ಎನ್ನುವುದನ್ನು ಹೇಳುವುದಕ್ಕೆ ಆಗುತ್ತದೆಯೇ ?

ಶ್ರೀ ಜಿ. ಬಸವಣ್ಣೆಪ್ಪ.—ಈ ಪ್ರಶ್ನೆಗೆ ನನಗೆ ನೋಟೀಸ್ ಬೇಕು.

ಪ್ರಶ್ನೆ ಕ್ರಮಾಂಕ 1494 (ಮಾನ್ಯ ಸದಸ್ಯರಾದ ಶ್ರೀನಿವಾಸ್‌ರವರ ಗೈರುಹಾಜರಿ)

(ಶ್ರೀ ಆರ್. ವಿ. ದೇಶಪಾಂಡೆಯವರ ಪರವಾಗಿ ಶ್ರೀ ಬಿ. ಆರ್. ಪಾಟೀಲರು ಪ್ರಶ್ನೆ ಮಾಡಿದುದು)

ವಿಷಯ : ದಾಂಡೇಲಿಯಲ್ಲಿ ಹೆಚ್ಚುವರಿ ಆರಕ್ಷಕ ಠಾಣೆಯನ್ನು ಪ್ರಾರಂಭಿಸುವ ಬಗ್ಗೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 661 (1699) ಶ್ರೀ ಆರ್. ವಿ. ದೇಶಪಾಂಡೆ (ಹಲಿಯಾಳ್).—

ಅ) ಜನ ಸಂಖ್ಯೆಯ ಹೆಚ್ಚಳದ ದೃಷ್ಟಿಯಿಂದ ಹಳಿಯಾಳ ತಾಲ್ಲೂಕಿನ ದಾಂಡೇಲಿಯಲ್ಲಿ ಹೆಚ್ಚುವರಿ ಆರಕ್ಷಕ ಠಾಣೆಯನ್ನು ಸ್ಥಾಪಿಸುವ ಬಗ್ಗೆ ಸರ್ಕಾರದ ಮುಂದೆ ಪ್ರಸ್ತಾಪವಿದೆಯೇ :

ಆ) ದಾಂಡೇಲಿಯಲ್ಲಿ ಆರಕ್ಷಕ ಉಪ ಅಧೀಕ್ಷಕರ ಕಛೇರಿಯನ್ನು ಸ್ಥಾಪಿಸುವ ಬಗ್ಗೆ ಮತ್ತೊಂದು ಪ್ರಸ್ತಾವ ಸರ್ಕಾರದ ಮುಂದಿದೆಯೇ :

ಇ) ಅಂದ ಮೇಲೆ ಈ ಬಗ್ಗೆ ಸರ್ಕಾರ ಸೂಕ್ತ ಕ್ರಮ ತೆಗೆದುಕೊಂಡಿರುವುದೆ ?

ಶ್ರೀ ರಮೇಶ್ ಜಿಗಜಿಣಗಿ (ಗೃಹ ರಾಜ್ಯ ಮಂತ್ರಿಗಳು).—

ಅ) ಪ್ರಸ್ತಾಪ ಸರ್ಕಾರದ ಪರಿಶೀಲನೆಯಲ್ಲಿದೆ.

ಆ) ಪ್ರಸ್ತಾವ ಸರ್ಕಾರದ ಪರಿಶೀಲನೆಯಲ್ಲಿದೆ.

ಇ) ಈ ವಿಷಯದಲ್ಲಿ ಶೀಘ್ರದಲ್ಲಿಯೇ ತೀರ್ಮಾನವನ್ನು ತೆಗೆದುಕೊಳ್ಳಲಾಗುವುದು.

ವಿಷಯ :—ಸಾತನೂರು ಆರಕ್ಷಕ ಠಾಣೆಯ ಬಗ್ಗೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ, 662 (1494) ಶ್ರೀ ಕೆ. ಜಿ. ಶ್ರೀನಿವಾಸಮೂರ್ತಿ (ಸಾತನೂರು).—ಮಾನ್ಯ ರಾಜ್ಯ ಗೃಹ ಮಂತ್ರಿಗಳು ದಯವಿಟ್ಟು ಈ ವಿಷಯಗಳನ್ನು ತಿಳಿಸುವರೆ ?

ಅ. ಸಾತನೂರು ವಿಧಾನ ಸಭಾ ಕ್ಷೇತ್ರದಲ್ಲಿರುವ ಸಾತನೂರಿನಲ್ಲಿ ಆರಕ್ಷಕ ಠಾಣೆ ಮತ್ತು ವಸತಿ ಗೃಹಗಳಿಲ್ಲದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಆ. ವಸತಿ ಗೃಹಗಳಿಗೆ ಮತ್ತು ಆರಕ್ಷಕ ಠಾಣೆಗಳಿಗೆ ಜಮೀನನ್ನು ಸ್ವಾಧೀನ ಪಡಿಸಿಕೊಂಡಿದ್ದರೂ ಈವರೆವಿಗೂ ಕಟ್ಟಡವನ್ನು ಕಟ್ಟದಿರಲು ಕಾರಣ ವೇನು :

ಇ. ಕನಕಪುರದಲ್ಲಿ ಗ್ರಾಮಾಂತರ ಪ್ರದೇಶಕ್ಕೆ ಬೇರೆ ಆರಕ್ಷಕ ಠಾಣೆ ಇರಬೇಕೆಂಬ ಸಲಹೆ ಬಂದಿದೆಯೇ :

ಈ. ಕನಕಪುರ ತಾಲ್ಲೂಕಿನಲ್ಲಿರತಕ್ಕ ಆರಕ್ಷಕ ಸಿಬ್ಬಂದಿ ಸಾಕಷ್ಟು ಇಲ್ಲವೆಂದು ತಿಳಿದಿಲ್ಲವೇ ? ಹಾಗಿದ್ದಲ್ಲಿ ಸಿಬ್ಬಂದಿ ವರ್ಗವನ್ನು ಜಾಸ್ತಿ ಮಾಡಲು ಕ್ರಮ ತೆಗೆದುಕೊಳ್ಳುವಿರಾ ?

ಶ್ರೀ ರಮೇಶ್ ಜಿಗಜಿಣಗಿ (ಗೃಹ ರಾಜ್ಯ ಮಂತ್ರಿಗಳು)—

ಅ. ಹೌದು.

ಆ. ಸಾತನೂರು ಆರಕ್ಷಕ ಠಾಣೆ ಮತ್ತು ವಸತಿ ಗೃಹಗಳನ್ನು ನಿರ್ಮಿಸುವುದಕ್ಕೆ ಪೋಲೀಸು ಇಲಾಖೆಯ ಕಟ್ಟಡ ಕಟ್ಟುವ ಕಾರ್ಯಕ್ರಮದ ಪಟ್ಟಿಯಲ್ಲಿ ಸೇರಿಸಿಕೊಳ್ಳಲಾಗಿದೆ. ಈ ಕೆಲಸ ಕ್ಕೋಸ್ಕರ ತಗಲುವ ವೆಚ್ಚದ ಮೊತ್ತವನ್ನು 1984-85ನೇ ಸಾಲಿನ ಆಯವ್ಯಯದಲ್ಲಿ ಹಣದ ಅಭಾವದಿಂದ ಒದಗಿಸಲು ಸಾಧ್ಯವಾಗಿಲ್ಲ.

ಇ. ಕನಕಪುರದಲ್ಲಿ ಬೇರೆ ಗ್ರಾಮಾಂತರ ಆರಕ್ಷಕ ಠಾಣೆ ಇರಬೇಕೆಂಬ ಬಗ್ಗೆ ಸಲಹೆ ಬಂದಿಲ್ಲ.

ಈ. ಕನಕಪುರ ತಾಲ್ಲೂಕಿನಲ್ಲಿರತಕ್ಕ ಆರಕ್ಷಕ ಸಿಬ್ಬಂದಿ ವರ್ಗವನ್ನು ಜಾಸ್ತಿಮಾಡಲು ಮತ್ತು ಕನಕಪುರ ತಾಲ್ಲೂಕಿನ ಮರಳವಾಡಿ ಗ್ರಾಮದಲ್ಲಿ ಒಂದು ಹೊಸದಾಗಿ ಆರಕ್ಷಕ ಠಾಣೆಯನ್ನು ಪ್ರಾರಂಭಿಸುವ ಸಲಹೆಗಳು ಪರಿಶೀಲನೆಯಲ್ಲಿವೆ.